# ರಾಮಕೃಷ್ಣ ಸುದ್ದಿ ಸಂಚಯ

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು–575 003.

Website : www.ramakrishnacredit.com  Email : ho@ramakrishnacredit.com

24 1994-2018 GROWTH DRIVEN BY PERFORMANCE

ಸಂಪುಟ : IV  ಸಂಚಿಕೆ : 1  ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ  ಏಪ್ರಿಲ್ – ಜೂನ್ 2018


## ಅಧ್ಯಕ್ಷರ ಮಾತು



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

**ಸಂಸ್ಥಾಪನಾ ದಿನ:**

ಸಂಘವು ಮೇ 7, 2018ರಂದು 24ನೇ ವರ್ಷಕ್ಕೆ ಕಾಲಿಟ್ಟಿದೆ. ಸಂಘದ 24ನೇ ವರ್ಷದ ಸಂಸ್ಥಾಪನೆಯ ದಿನದ ಶುಭಾಶಯವನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಹರ್ಷಿಸುತ್ತೇನೆ.

**2018–19ನೇ ಮೊದಲ ತ್ರೈಮಾಸಿಕ ಅವಧಿ ದಿನಾಂಕ 30.06.2018ಕ್ಕೆ ಸಂಘದ ಪ್ರಗತಿ:**

2018–19ನೇ ಸಾಲಿನ ಮೊದಲ ತ್ರೈಮಾಸಿಕ ಅವಧಿಯ ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ಸಂಘವು ಈ ಸಾಲಿನಲ್ಲಿ ಉತ್ತಮ ಆರಂಭವನ್ನು ಪಡೆದುಕೊಂಡಿದೆ. 31.03.2018ಕ್ಕೆ ರೂ.160 ಕೋಟಿಯಿದ್ದ ಠೇವಣಾತಿಯು 30.06.2018ಕ್ಕೆ ರೂ.167 ಕೋಟಿಯನ್ನು ತಲುಪಿ ರೂ.7 ಕೋಟಿ ವೃದ್ಧಿಯಾಗಿದೆ. ಸಾಲ ಮತ್ತು ಮುಂಗಡವು 31.03.2018ಕ್ಕೆ ರೂ.128 ಕೋಟಿ ಇದ್ದು, 30.06.2018ಕ್ಕೆ ರೂ.132 ಕೋಟಿಯಾಗಿದ್ದು ರೂ.4 ಕೋಟಿ ಹೆಚ್ಚಳವಾಗಿರುವುದು. 30.06.2018ಕ್ಕೆ ಸಂಘವು ರೂ.93 ಲಕ್ಷ ನಿವ್ವಳ ಲಾಭ ಗಳಿಸಿರುತ್ತದೆ. ಒಟ್ಟು ವ್ಯವಹಾರ 31.03.2018ಕ್ಕೆ ರೂ.288 ಕೋಟಿಯಿದ್ದು, 30.06.2018ಕ್ಕೆ ರೂ.299 ಆಗಿ ರೂ.11 ಕೋಟಿ ಹೆಚ್ಚಳವಾಗಿದೆ.

### ಜೂನ್ 2017ಕ್ಕೆ ಹೋಲಿಸಿದಲ್ಲಿ ಜೂನ್ 2018ಕ್ಕೆ ಆಗಿರುವ ಪ್ರಗತಿಯ ಪಕ್ಷಿನೋಟ

| ಕ್ರ.ಸಂ. | ಕಾರ್ಯ ವಿಭಾಗ | ಜೂನ್ 2017ಕ್ಕೆ ಇದ್ದಂತೆ | ಜೂನ್ 2018ಕ್ಕೆ ಇದ್ದಂತೆ | ಹೆಚ್ಚಳ (ರೂ) | ಶೇಕಡಾವಾರು ವೃದ್ಧಿ |
|---|---|---|---|---|---|
| 1 | ಠೇವಣಾತಿಗಳು | ₹ 136.01 ಕೋಟಿ. | ₹ 166.83 ಕೋಟಿ. | 30.82 ಕೋಟಿ | 23% |
| 2 | ಸಾಲ ಮತ್ತು ಮುಂಗಡ | ₹ 112.23 ಕೋಟಿ. | ₹ 131.59 ಕೋಟಿ. | 19.35 ಕೋಟಿ | 17% |
| 3 | ನಿವ್ವಳ ಅನುತ್ಪಾದಕ ಆಸ್ತಿ | Nil | Nil | - | - |
| 4 | ನಿವ್ವಳ ಲಾಭ | ₹ 57.97 ಲಕ್ಷ | ₹ 92.70 ಲಕ್ಷ | 34.73 ಲಕ್ಷ | 60% |
| 5 | ಒಟ್ಟು ವ್ಯವಹಾರ | ₹ 248.24 ಕೋಟಿ. | ₹ 298.42 ಕೋಟಿ. | 50.18 ಕೋಟಿ | 20% |

**30.06.2018 ಕ್ಕೆ ಉತ್ತಮ ನಿರ್ವಹಣೆತೋರಿದ ಶಾಖೆಗಳಿಗೆ ಅಭಿನಂದನೆ :**

ಈ ಸಾಲಿನ ಮೊದಲ ತ್ರೈಮಾಸಿಕ ಅವಧಿಯಲ್ಲಿ ಚಿಲಿಂಬಿ, ವೆಲೆನ್ಸಿಯಾ, ಮುಲ್ಕಿ, ಸುರತ್ಕಲ್, ಶಾಖೆಗಳು ನಿಗದಿತ ಎಲ್ಲಾ ಮುಖ್ಯ ಗುರಿಗಳನ್ನು ಸಾಧಿಸಿರುವುದು. ಈ ಶಾಖೆಗಳ ಶಾಖಾಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

**ಸಿಬ್ಬಂದಿ ವೇತನ ಪರಿಷ್ಕರಣೆ :**

01.01.2018ರಿಂದ ಅನ್ವಯಿಸುವಂತೆ, ಸಂಘದ ಸಿಬ್ಬಂದಿಗಳಿಗೆ ವೇತನ ಪರಿಷ್ಕರಣೆ ಮಾಡಿದ್ದು, ಇತರ ಸಹಕಾರಿ ಸಂಘಗಳು/ ಬ್ಯಾಂಕುಗಳು ನೀಡುತ್ತಿರುವ ವೇತನಕ್ಕೆ ಹೋಲಿಸಿದಾಗ, ಸಂಘದ ವೇತನವು ಅತ್ಯುತ್ತಮ ಮಟ್ಟದಲ್ಲಿರುವುದು. ಸಿಬ್ಬಂದಿಗಳ ಈವರೆಗಿನ ಕಾರ್ಯ ನಿರ್ವಹಣೆಗಳು ಶ್ಲಾಘನೀಯವಾಗಿದ್ದು ಮುಂಬರುವ ದಿನಗಳಲ್ಲಿಯೂ ಇದೇ ರೀತಿ ಸಂಘದ ವ್ಯವಹಾರಾಭಿವೃದ್ಧಿಯನ್ನು ಮಾಡುವರು ಎಂಬ ಭರವಸೆ ವಿಶ್ವಾಸದಿಂದ ಉತ್ತಮ ಹೆಚ್ಚಳದೊಂದಿಗೆ ವೇತನವನ್ನು ಪರಿಷ್ಕರಿಸಲಾಗಿದೆ.

**ನವಾಗತ ಸಿಬ್ಬಂದಿಗಳಿಗೆ ಸ್ವಾಗತ :**

35 ಸಿಬ್ಬಂದಿಗಳನ್ನು ನೇಮಕಾತಿ ಮಾಡಲಾಗಿದ್ದು, ಆಯಾಯ ಶಾಖೆಗಳಿಗೆ ಈಗಾಗಲೇ ನಿಯೋಜಿಸಲಾಗಿದೆ. ಎಲ್ಲಾ ನವಾಗತ ಸಿಬ್ಬಂದಿಗಳನ್ನು ಸಂಘಕ್ಕೆ ಹಾರ್ದಿಕವಾಗಿ ಸ್ವಾಗತಿಸುತ್ತೇನೆ.

**ಆಶಯ :**

ಸಿಬ್ಬಂದಿ ವೇತನ ಪರಿಷ್ಕರಣೆ ಹಾಗೂ ಹೊಸ ಸಿಬ್ಬಂದಿಗಳ ನೇಮಕಾತಿಯಿಂದ ಈ ವರ್ಷ ರೂ.1.05 ಕೋಟಿ ಹೆಚ್ಚುವರಿ ಸಿಬ್ಬಂದಿ ವೆಚ್ಚವಾಗುವುದು. ಶಾಖಾಧಿಕಾರಿ ಮತ್ತು ಹೊಸ ಸಿಬ್ಬಂದಿಗಳು ಸೇರಿದಂತೆ ಶಾಖೆಯ ಎಲ್ಲಾ ಸಿಬ್ಬಂದಿಗಳು ಶಾಖೆಗೆ ನೀಡಲಾದ ಗುರಿಗಳನ್ನು ಗಮನದಲ್ಲಿಟ್ಟುಕೊಂಡು ಅದನ್ನು ಸಾಧಿಸುವತ್ತ ಹೆಚ್ಚು ಕಾರ್ಯದಕ್ಷತೆಯಿಂದ ಕಾರ್ಯ ನಿರ್ವಹಿಸಿ, ಶಾಖೆಯ ವ್ಯವಹಾರವನ್ನು ಹೆಚ್ಚಿಸಿಕೊಂಡು, ಶಾಖೆಗೆ ನೀಡಲಾದ ಠೇವಣಾತಿ, ಸಾಲ ಮತ್ತು ಮುಂಗಡ, ಅನುತ್ಪಾದಕ ಆಸ್ತಿ ಮತ್ತು ಮುಖ್ಯವಾಗಿ ಕಡಿಮೆದರ ಬಡ್ಡಿಯ ಠೇವಣಿಗಳ ಸಂಗ್ರಹಣೆಗೆ ಆದ್ಯತೆ ನೀಡಿ, ಠೇವಣಿಯ cost of deposit ಕಡಿಮೆ ಇರಿಸಿ, ಹೆಚ್ಚು ಸಾಲಗಳನ್ನು ವಿತರಿಸಿ, ಸಾಲದ ಮೇಲಿನ ಬಡ್ಡಿಯನ್ನು ಕ್ಲಪ್ತ ಸಮಯದಲ್ಲಿ ವಸೂಲಾತಿ ಮಾಡಿ ಬಡ್ಡಿ ಆದಾಯವನ್ನು ಗರಿಷ್ಠಗೊಳಿಸಿ, ನಿಗದಿತ ನಿವ್ವಳ ಲಾಭದ ಗುರಿಗಿಂತ ಹೆಚ್ಚಿನ ಲಾಭವನ್ನು ಗಳಿಸಬೇಕು ಹಾಗೂ ಸಿಬ್ಬಂದಿಗಳ ಸಂಖ್ಯೆಯ ಹೆಚ್ಚಳಕ್ಕನುಗುಣವಾಗಿ ಶಾಖೆಯ ವ್ಯವಹಾರವನ್ನು ವೃದ್ಧಿಸಿ, ಸಿಬ್ಬಂದಿ productivity ಯನ್ನು ಹೆಚ್ಚಿಸಿಕೊಂಡು 2018–19ನೇ ಸಾಲಿಗೆ ನಿಗದಿಪಡಿಸಿದ ಎಲ್ಲಾ ಗುರಿಗಳನ್ನು ಸಾಧಿಸಲು ಎಲ್ಲಾ ಶಾಖಾಧಿಕಾರಿಗಳು, ಸಿಬ್ಬಂದಿಗಳು ಈಗಿನಿಂದಲೇ ಹೆಚ್ಚಿನ ಮುತುವರ್ಜಿಯಿಂದ ಕಾರ್ಯನಿರ್ವಹಿಸಲು ಆಶಿಸುತ್ತಾ ಎಲ್ಲರಿಗೂ ಶುಭವನ್ನು ಹಾರೈಸುತ್ತೇನೆ.

**ಕೆ. ಜೈರಾಜ್ ಬಿ. ರೈ,** ಅಧ್ಯಕ್ಷರು

## ಸಂಘದ ಕೇಂದ್ರ ಕಛೇರಿಯ ನವೀಕೃತ 'ಆಡಳಿತ ಮಂಡಳಿ ಸಭಾ ಕೊಠಡಿ'ಯ ಉದ್ಘಾಟನೆ



ದಿನಾಂಕ 30.04.2018ರಂದು ಸಂಘದ ಕೇಂದ್ರ ಕಛೇರಿಯಲ್ಲಿ ಹವಾನಿಯಂತ್ರಿತ ವ್ಯವಸ್ಥೆಯೊಂದಿಗೆ ಆಧುನೀಕರಿಸಿ ನವೀಕರಿಸಲಾದ 'ಆಡಳಿತ ಮಂಡಳಿ ಸಭಾ ಕೊಠಡಿ'ಯನ್ನು ಉದ್ಘಾಟಿಸಲಾಯಿತು.

## ಸಂಘದ ನಿವೇಶನದಲ್ಲಿ ಭೂಮಿಪೂಜೆ ಕಾರ್ಯಕ್ರಮ




ದಿನಾಂಕ 06.07.2018ರಂದು ಸಂಘದ ನಿವೇಶನದಲ್ಲಿ ಭೂಮಿ ಪೂಜೆಯನ್ನು ಮಾಡಿ ಸಂಘದ ನಾಮಫಲಕ ಸ್ಥಾಪನೆಯ ಕಾರ್ಯಕ್ರಮವನ್ನು ಜರಗಿಸಲಾಯಿತು.

## ಶಾಖೆಗಳಲ್ಲಿ ಗ್ರಾಹಕ ಸಂಪರ್ಕ ಸಭೆ

ಗ್ರಾಹಕರೊಂದಿಗೆ ಉತ್ತಮ ಸೌಹಾರ್ದತೆ, ಸಂವಹನೆಯ ವೃದ್ಧಿ, ವಿಚಾರ ವಿನಿಮಯಕ್ಕೆ ಸಹಕಾರಿಯಾಗುವಂತೆ, ಶಾಖೆಗಳ ಸ್ಥಾಪನಾ ದಿನದ ಅಂಗವಾಗಿ ಆಯಾಯ ಶಾಖೆಗಳಲ್ಲಿ 2016–2017ನೇ ಸಾಲಿನಿಂದ ಗ್ರಾಹಕ ಸಂಪರ್ಕ ಸಭೆಯನ್ನು ಜರುಗಿಸಲಾಗುತ್ತಿದೆ. ಈ ಕಾರ್ಯಕ್ರಮಗಳ ಸರಣಿಯನ್ನು 2017–18 ಮತ್ತು ಪ್ರಸ್ತುತ 2018–19ನೇ ಸಾಲಿನಲ್ಲಿ ಮುಂದುವರಿಸಲಾಗುತ್ತಿದ್ದು, ಈ ಕೆಳಗಿನ ಶಾಖೆಗಳಲ್ಲಿ ಗ್ರಾಹಕ ಸಂಪರ್ಕ ಸಭೆ ಜರಗಿಸಲಾಗಿರುತ್ತದೆ.



23.01.2018ರಂದು ಕಾರ್ಕಳ ಶಾಖೆಯ ಗ್ರಾಹಕ ಸಂಪರ್ಕ ಸಭೆ




10.04.2018ರಂದು ಮುಲ್ಕಿ ಶಾಖೆಯ ಗ್ರಾಹಕ ಸಂಪರ್ಕ ಸಭೆ



06.07.2018ರಂದು ಸುರತ್ಕಲ್ ಶಾಖೆಯ ಗ್ರಾಹಕ ಸಂಪರ್ಕ ಸಭೆ

## ಸಂಘದ ವಾರ್ಷಿಕ ಮಹಾಸಭೆಯ ದಿನಾಂಕ ನಿಗದಿ

ನಮ್ಮ ಸಂಘದ 2017–18ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು 16.09.2018ನೇ ಆದಿತ್ಯವಾರ "ಮಂಗಳೂರಿನ ಲೇಡಿಹಿಲ್‌ನಲ್ಲಿರುವ ಉರ್ವ ಚರ್ಚ್ ಸೆಂಟನರಿ ಹಾಲ್"ನಲ್ಲಿ ಜರಗಿಸಲು ತೀರ್ಮಾನಿಸಲಾಗಿದೆ. ಸಭೆಯ ನೋಟೀಸನ್ನು ಅರ್ಹ ಸದಸ್ಯರಿಗೆ ಕಳುಹಿಸಲಾಗುವುದು.

## ಹುಟ್ಟುಹಬ್ಬದ ಶುಭಾಶಯಗಳು

ಶ್ರೀಮತಿ ಲಕ್ಷ್ಮೀ ಜೆ. ಶೆಟ್ಟಿ – ಉಪಾಧ್ಯಕ್ಷರು
ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ – ನಿರ್ದೇಶಕರು
ಸವಣೂರು ಶ್ರೀ ಕೆ. ಸೀತಾರಾಮ ರೈ – ನಿರ್ದೇಶಕರು

| ಸಿಬ್ಬಂದಿಗಳ ಹೆಸರು ಮತ್ತು | ಶಾಖೆ | ಸಿಬ್ಬಂದಿಗಳ ಹೆಸರು ಮತ್ತು | ಶಾಖೆ |
|---|---|---|---|
| ಶ್ರೀ ಮಿಥುನ್‌ಚಂದ್ರ | ಉಡುಪಿ | ಶ್ರೀ ವಿರಾಜ್ ಜೆ. ಶೆಟ್ಟಿ | ಕಾರ್ಕಳ |
| ಶ್ರೀ ತಿಮ್ಮಯ್ಯ ಶೆಟ್ಟಿ | ಚಿಲಿಂಬಿ | ಶ್ರೀಮತಿ ಮಮತಾಎಚ್. | ಉಪ್ಪಿನಂಗಡಿ |
| ಶ್ರೀ ಚಂದ್ರಹಾಸ್ ಶೆಟ್ಟಿ | ವೆಲೆನ್ಸೀಯಾ | ಶ್ರೀ ಅಶೋಕ್ ಎಂ. | ಕಾರ್ಕಳ |
| ಶ್ರೀ ದಿನೇಶ್ ಶೆಟ್ಟಿ | ವಿಟ್ಲ | ಶ್ರೀ ಸುರೇಶ್ ನ್ಯಾಕ್ | ಮೂಡಬಿದ್ರಿ |
| ಶ್ರೀಮತಿ ಜಯಲಕ್ಷ್ಮಿ | ಹೆಬ್ರಿ | ಶ್ರೀಮತಿ ರೇಖಾ ಎನ್. ಶೆಟ್ಟಿ | ಸುರತ್ಕಲ್ |
| ಶ್ರೀಮತಿ ವೈಶಾಲಿ | ಬಿ.ಸಿ.ರೋಡ್ | ಶ್ರೀಮತಿ ಮಮತಾ ಎಂ. | ಮಂಗಳೂರು |
| ಶ್ರೀ ದಿನೇಶ್‌ರೈ | ಸುಳ್ಯ | ಶ್ರೀಮತಿ ಶ್ವೇತಾ | ಕೇಂದ್ರ ಕಛೇರಿ |
| ಶ್ರೀ ಸುಧೀರ್ ಕುಮಾರ್ ಡಿ. | ಸುರತ್ಕಲ್ | ಶ್ರೀ ಮೋಹನ್ ಶೆಟ್ಟಿ | ಉಡುಪಿ |
| ಶ್ರೀ ದಿತೇಶ್ | ಮುಲ್ಕಿ | ಶ್ರೀ ನವೀನ್ ಶೆಟ್ಟಿ | ಕೇಂದ್ರ ಕಛೇರಿ |
| ಶ್ರೀ ಸುಭ್ರತ್ | ಕಾರ್ಕಳ | ಶ್ರೀ ಅಮಿತ್ ಕುಮಾರ್ | ವೆಲೆನ್ಸೀಯಾ |
| ಶ್ರೀ ಜಯರಾಮ್ | ಕುಂದಾಪುರ | ಶ್ರೀಮತಿ ಅರುಣ ರೈ | ವೆಲೆನ್ಸೀಯಾ |
| ಶ್ರೀ ಪ್ರವೀಣ್‌ರೈ | ಉಪ್ಪಿನಂಗಡಿ | | |

ಈ ತ್ರೈಮಾಸಿಕ ಅವಧಿಯಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ತಮಗೆಲ್ಲರಿಗೂ ಹುಟ್ಟುಹಬ್ಬದ ಹಾರ್ದಿಕ ಶುಭವನ್ನು ಕೋರುತ್ತೇವೆ.

### ಅಭಿನಂದನೆಗಳು

ಸಂಘದ ಕೇಂದ್ರ ಕಛೇರಿಯ ಅಟೆಂಡರ್ ಶ್ರೀ ಹರೀಶ್ ಇವರು ಗಂಡು ಮಗವಿನ ತಂದೆಯಾಗಿದ್ದಾರೆ. ಇವರಿಗೆ ಹಾರ್ದಿಕ ಅಭಿನಂದನೆಗಳು.

### ಕಥೆ /ಕವನ /ಪ್ರಬಂಧ /ಅಂಕಣ ಮುಂತಾದ ಬರಹಗಳಿಗೆ ಆಹ್ವಾನ

ಈ ಪತ್ರಿಕೆಯಲ್ಲಿ ಪ್ರಕಟಿಸುವರೇ ಕಥೆ/ಕವನ/ಪ್ರಬಂಧ/ಅಂಕಣ ಮುಂತಾದ ಬರಹಗಳನ್ನು ಸಿಬ್ಬಂದಿಗಳಿಂದ ಆಹ್ವಾನಿಸುತ್ತಿದ್ದೇವೆ. ತಮ್ಮ ಲೇಖನಗಳನ್ನು ಕ್ಲಪ್ತವಾಗಿ ಟೈಪ್ ಮಾಡಿ ಅಥವಾ ಕೈ ಬರಹದಲ್ಲಿ ಕೇಂದ್ರ ಕಛೇರಿಗೆ ಸಲ್ಲಿಸುವುದು. ಅರ್ಹವೆನಿಸುವ ಲೇಖನಗಳನ್ನು ಪ್ರಕಟಿಸಲಾಗುವುದು.

### ಗೃಹ ಪ್ರವೇಶ

ಸಂಘದ ಕೇಂದ್ರ ಕಛೇರಿಯ ಅಕೌಂಟೆಂಟ್ ಶ್ರೀಮತಿ ಉಷಾ ಎಂ. ಶೆಟ್ಟಿಯವರ ಫ್ಲಾಟ್ ನಂ.105 "ಶಕ್ತಿ ಎಲೆಗೇನ್ಸ್" ಇದರ ಗೃಹ ಪ್ರವೇಶ ಕಾರ್ಯಕ್ರಮ ದಿನಾಂಕ 23.04.2018 ರಂದು ಜರಗಿತು. ಇವರಿಗೆ ಹಾರ್ದಿಕ ಅಭಿನಂದನೆಗಳು.

### ಸಿಬ್ಬಂದಿ ವರ್ಗಾವಣೆ

| ಸಿಬ್ಬಂದಿ ಹೆಸರು | ಶಾಖೆ |
|---|---|
| ಶ್ರೀ ಜಯರಾಮ್, ಕ್ಲರ್ಕ್ | ಬೈಂದೂರು |
| ಶ್ರೀ ನಾಗರಾಜ್, ಕ್ಲರ್ಕ್ | ಕುಂದಾಪುರ |
| ಶ್ರೀ ರಂಜಿತ್ ಶೆಟ್ಟಿ, ಕ್ಲರ್ಕ್ | ಮೂಡಬಿದ್ರಿ |
| ಶ್ರೀ ನಾಗರಾಜ್ ಎಚ್., ಅಟೆಂಡರ್ | ಬೈಂದೂರು |

# 2018ನೇ ಸಾಲಿನಲ್ಲಿ ಉತ್ತಮ ಶೈಕ್ಷಣಿಕ ಸಾಧನೆ ತೋರಿದ ಸಂಘದ ಸಿಬ್ಬಂದಿಗಳ ಮಕ್ಕಳಿಗೆ ಅಭಿನಂದನೆಗಳು



ಸಂಘದ ಹೆಬ್ರಿ ಶಾಖೆಯಲ್ಲಿ ವ್ಯವಸ್ಥಾಪಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ರಾಘವೇಂದ್ರ ರಾವ್ ಇವರ ಮಗಳಾದ ಕು. ಮಾನಸರಾವ್ ಇವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.97.44 ಪಡೆದಿರುತ್ತಾರೆ. ಇವರು ಎಸ್.ಎನ್.ವಿ. ಆಂಗ್ಲ ಮಾಧ್ಯಮ ಶಾಲೆ, ಹಿರಿಯಂಗಡಿ, ಆನೆಕೆರೆ ಶಾಲೆಯ ವಿದ್ಯಾರ್ಥಿನಿ.



ಸಂಘದ ಉಪ್ಪಿನಂಗಡಿ ಶಾಖೆಯ ಶಾಖಾ ವ್ಯವಸ್ಥಾಪಕರಾದ ಶ್ರೀ ಶ್ರೀಹರ್ಷ ಡಿ.ಎಸ್. ರವರ ಮಗ ಮಾಸ್ಟರ್ ವಿಖ್ಯಾತ್ ಇವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.94.88 ಪಡೆದಿರುತ್ತಾರೆ. ಇವರು ಬೆತಾನಿ ಹೈಸ್ಕೂಲ್, ಪುತ್ತೂರು ಶಾಲೆಯ ವಿದ್ಯಾರ್ಥಿ.



ಸಂಘದ ಪುತ್ತೂರು ಶಾಖೆಯ ಶಾಖಾ ವ್ಯವಸ್ಥಾಪಕರಾದ ಶ್ರೀ ಕರುಣಾಕರ ಶೆಟ್ಟಿರವರ ಮಗ ಮಾಸ್ಟರ್ ಪ್ರತೀಕ್ ಶೆಟ್ಟಿ ಇವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.88.32 ಪಡೆದಿರುತ್ತಾರೆ. ಇವರು ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆ, ವಿವೇಕ ನಗರ, ತೆಂಕಿಲ, ಪುತ್ತೂರು ಶಾಲೆಯ ವಿದ್ಯಾರ್ಥಿ.



ಸಂಘದ ಮೂಡಬಿದ್ರಿ ಶಾಖೆಯ ಶಾಖಾ ವ್ಯವಸ್ಥಾಪಕರಾದ ಶ್ರೀಮತಿ ನಿರ್ಮಲಾ ಪಿ. ಶೆಟ್ಟಿರವರ ಮಗ ಮಾಸ್ಟರ್ ಜೋಷಿತ್ ಪಿ. ಶೆಟ್ಟಿ ಇವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.81.12 ಪಡೆದಿರುತ್ತಾರೆ. ಇವರು ರೋಟರಿ ಆಂಗ್ಲ ಮಾಧ್ಯಮ ಶಾಲೆ, ಜ್ಯೋತಿ ನಗರ, ಮೂಡಬಿದ್ರಿ ಶಾಲೆಯ ವಿದ್ಯಾರ್ಥಿ.



ಸಂಘದ ಉಪ್ಪಿನಂಗಡಿ ಶಾಖೆಯಲ್ಲಿ ವ್ಯವಸ್ಥಾಪಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಬಾಲಕೃಷ್ಣ ರೈ ಇವರ ಮಗಳಾದ ಕು. ಹಿತೈಷಿ ಇವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.79.20 ಪಡೆದಿರುತ್ತಾರೆ. ಇವರು ವಿಟ್ಲ ಜೇಸಿಯಸ್ ಆಂಗ್ಲ ಮಾಧ್ಯಮ ಶಾಲೆ, ಬಸವನಗುಡಿ, ವಿಟ್ಲ ಶಾಲೆಯ ವಿದ್ಯಾರ್ಥಿನಿ.



ಸಂಘದ ಪುತ್ತೂರು ಶಾಖೆಯಲ್ಲಿ ಅಟೆಂಡರ್ ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಶೇಷಪ್ಪ ನ್ಾಯ್ಕ್‌ರವರ ಮಗ ಮಾಸ್ಟರ್ ಅಭಿಲಾಶ್ ಎಸ್. ಇವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.76.32 ಪಡೆದಿರುತ್ತಾರೆ. ಇವರು ಸರಕಾರಿ ಜೂನಿಯರ್ ಶಾಲೆ, ಸುಳ್ಯ ಶಾಲೆಯ ವಿದ್ಯಾರ್ಥಿ.

2018ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿರುವ ಕು. ಮಾನಸರಾವ್, ಮಾ. ವಿಖ್ಯಾತ್, ಮಾ. ಪ್ರತೀಕ್ ಶೆಟ್ಟಿ, ಮಾ. ಜೋಷಿತ್ ಪಿ. ಶೆಟ್ಟಿ, ಕು. ಹಿತೈಷಿ ಮತ್ತು ಮಾ. ಅಭಿಲಾಶ್‌ರವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಉಜ್ವಲ ಭವಿಷ್ಯವನ್ನು ಹಾರೈಸುತ್ತೇವೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.90 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಸಿಬ್ಬಂದಿಗಳ ಮಕ್ಕಳನ್ನು ಸಂಘದ ಮಹಾಸಭೆಯಲ್ಲಿ ಅಭಿನಂದಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

Private Circulation only

BOOK-POST

To,

If not delivered please return to :

**SRI RAMAKRISHNA CREDIT CO-OP. SOCIETY LTD.**

2nd Floor, Amruthotsava Building, Bunts Hostel Circle, Mangalore - 575 003.